ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ

## ಸಿ.ಸಿ.ನಂ. 967/2013

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮೊಹಿತ್ ಸಹದೇವ್ | ಪಿ.ಡಬ್ಲ್ಯೂ-02 |
| ತಂದೆಯ ಹೆಸರು | : | ಲೇಟ್ ಬಿ ಶಿವಗೇಗೌಡ | ಸಿ.ಡಬ್ಲ್ಯೂ-01 |
| ವಯಸ್ಸು | : | 38 ವರ್ಷ | |
| ಉದ್ಯೋಗ | : | ಪೋಲಿಸ್ ಇನ್ಸ್‌ಪೆಕ್ಟರ್, ಹನೂರು ಪೋಲಿಸ್ ಠಾಣೆ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 02.03.2019 |
| ವಾಸಸ್ಥಳ | : | ಹನೂರು ತಾ. ಚಾಮರಾಜನಗರ ಜಿಲ್ಲೆ. | |

ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ

ನಾನು ಸರಗೂರು ಪೋಲಿಸ್ ಠಾಣೆಯಲ್ಲಿ ದಿಃ 08.04.2013 ರಿಂದ ದಿಃ 20.07.2013 ರ ತನಕ ಪಿ.ಎಸ್.ಐ. ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 19.04.2013 ರಂದು ಬಾತ್ಮೀದಾರರ ಖಚಿತ ಮಾಹಿತಿಯ ಮೇರೆಗೆ ಸರಗೂರು ಟೌನ್ ಎಪಿಎಂಸಿ ಹಿಂಭಾಗದ ಅಂಬೇಡ್ಕರ್ ಬಡಾವಣೆಯ ವಾಸಿ ಆರೋಪಿಯ ಮನೆಯ ಹತ್ತಿರ ದನವನ್ನು ಕತ್ತರಿಸಿ ಮಾಂಸವನ್ನು ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ನಾನು ಮತ್ತು ಸಿಬ್ಬಂದಿ ವರ್ಗದವರಾದ ಚಾಸಾ-2 ರಿಂದ 6 ರವರು ಇಲಾಖಾ ವಾಹನದಲ್ಲಿ ಪಂಚರಾದ ಚಾಸಾ-7 ರಿಂದ 9 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಆರೋಪಿಯ ಮನೆಯ ಬಳಿ ಹೋಗಿರುತ್ತೇವೆ. ಅಲ್ಲಿ 100 ಕೆ.ಜಿ.ಯಷ್ಟು ದನದ ಮಾಂಸವಿದ್ದು, ಎರಡು ಗೋಣಿ ಚೀಲದಲ್ಲಿ ತುಂಬಿರುತ್ತಾರೆ ಹಾಗೂ ದನದ ಮೂಳೆಗಳು ಮತ್ತು ಕೊಂಬುಗಳು ಸಹ ಇದ್ದವು. ಆ ದಿನ ಆರೋಪಿಯು ಸಹ ಅಲ್ಲೇ ಇದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿಯು ಗೈರು ಹಾಜರಿರುತ್ತಾರೆ. ಈ ಬಗ್ಗೆ ವಿಚಾರಿಸಲಾಗಿ ಆರೋಪಿಯ ಬಗ್ಗೆ ಯಾವುದೇ ರಹದಾರಿ ಇರುವುದಿಲ್ಲ.

ನಂತರ ಪಂಚರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿ, ಮಾಲನ್ನು ಮತ್ತು ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ಮಹಜರ್ ಕ್ರಮವನ್ನು ಜರುಗಿಸುವ ಕಾಲಕ್ಕೆ ಬೆಳಿಗ್ಗೆ 9.15 ರಿಂದ 10.15 ಗಂಟೆ ಸಮಯವಾಗಿರುತ್ತದೆ. ಸದರಿ ಮಹಜರ್ ಕ್ರಮವನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಂತರ ಮಾಲು ಮತ್ತು ಆರೋಪಿಯ ಸಮೇತ ಪೋಲಿಸ್ ಠಾಣೆಗೆ ಹಾಜರಾಗಿ ಸ್ವ ವರದಿಯನ್ನು ತಯಾರಿಸಿರುತ್ತೇನೆ. ನಂತರ ಠಾಣಾ ಮೊಕದ್ದಮೆ ಸಂಖ್ಯೆ 108/13 ರಲ್ಲಿ ಪ್ರಕರಣವನ್ನು ನೋಂದಾಯಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಸ್ವ ವರದಿಯನ್ನು ಈ ದಿನ ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡಿದ್ದಂತಹ ಮಾಲನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ. ನಂತರ 4 ತುಂಡಿನಷ್ಟು ಮಾಂಸವನ್ನು ಪಶುವೈದ್ಯಾಧಿಕಾರಿಗಳವರಿಗೆ ಪರಿಕ್ಷೀಸಿ ವರದಿ ನೀಡುವಂತೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ಉಳಿದ ಮಾಲನ್ನು ನಾಶಪಡಿಸಲು ಅನುಮತಿಯನ್ನು ಪಡೆದಿರುತ್ತೇನೆ.

ನಂತರ ಅದೇ ದಿನ ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಆರೋಪಿಯನ್ನು ಕೂಲಂಕುಷವಾಗಿ ವಿಚಾರಣೆ ಮಾಡಿ ಸಿಬ್ಬಂದಿಗಳ ಬೆಂಗಾವಲಿನಲ್ಲಿ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ದಿಃ 16.05.2013 ರಂದು ತನಿಖೆಯನ್ನು ಪೂರೈಸಿ ಅಂತಿಮ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ವೈದ್ಯಾಧಿಕಾರಿಗಳಿಂದ ಪಡೆದಿದ್ದಂತಹ ವರದಿಯನ್ನು ಸಾಕ್ಷಿಯು ನೋಡಿ

ಗುರುತಿಸಿದ ಮೇರೆಗೆ ಅದನ್ನು ನಿಪಿ–4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಸಿ.ಎಸ್. ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಒ.,

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೆಗ್ಗಡದೇವನಕೋಟೆ